**ಕರ್ನಾಟಕ ಸರ್ಕಾರ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**
**ಬೆಂಗಳೂರು**
**ನೋವೆಲ್ ಕರೋನಾ ವೈರಸ್ (ಕೋವಿಡ್-19)**
**ಪತ್ರಿಕಾ ಪ್ರಕಟಣೆ**

**ದಿನಾಂಕ: 28.03.2020** **ಸಮಯ : ಮಧ್ಯಾಹ್ನ 2 ಗಂಟೆ**

ಇಲ್ಲಿಯವರೆಗೆ ಭಾರತವೂ ಸೇರಿದಂತೆ 202 ದೇಶ/ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕರೋನಾ ವೈರಸ್‌ನ್ನು (ಕೋವಿಡ್-19) ಅಂತರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (ಪಿಹೆಚ್‌ಐಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. 11 ಮಾರ್ಚ್ 2020ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್-19ನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ರೋಗ ತಡೆಗಟ್ಟುವ ಕ್ರಮಗಳನ್ನು ಎಲ್ಲ ರೀತಿಯ ಸರ್ವೇಕ್ಷಣೆಯನ್ನು ಮತ್ತು ಸಮೂಹ ನಿಯಂತ್ರಣ ಕಾರ್ಯತಂತ್ರಗಳನ್ನು ಬಲಪಡಿಸಿದೆ. ಅಂತರಾಷ್ಟ್ರೀಯ ಪ್ರಯಾಣಿಕರ ಸಾರ್ವತ್ರಿಕ ತಪಾಸಣೆ ಮುಂದುವರೆದಿದೆ.

**"ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 76 ಕೋವಿಡ್-19 ಖಚಿತಪಟ್ಟ ಪ್ರಕರಣಗಳು, ಅವುಗಳಲ್ಲಿ 3 ಮರಣ ಮತ್ತು 5 ಜನ ಬಿಡುಗಡೆ ಹೊಂದಿರುತ್ತಾರೆ."**

- 68 ಕೋವಿಡ್-19 ಪೀಡಿತ ರೋಗಿಗಳು ಗೊತ್ತುಪಡಿಸಿದ ಆಸ್ಪತ್ರೆಗಳ ಪ್ರತ್ಯೇಕ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯವು ಸ್ಥಿರವಾಗಿರುತ್ತದೆ.
- ಕರ್ನಾಟಕ ರಾಜ್ಯದಲ್ಲಿ ನೂತನವಾಗಿ 12 ಹೊಸ ಕೋವಿಡ್ -19 ಪೀಡಿತರ ವಿವರ ಕೆಳಕಂಡಂತೆ ಇರುತ್ತದೆ.
    - P65: 54 ವರ್ಷದ ಮಹಿಳೆ ಉತ್ತರ ಕನ್ನಡದ ನಿವಾಸಿಯಾಗಿದ್ದು ಮತ್ತು ರೋಗಿ-36ರ (ಪತ್ನಿ) ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಉತ್ತರ ಕನ್ನಡದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
    - P66: 28 ವರ್ಷದ ಮಹಿಳೆ ಉತ್ತರ ಕನ್ನಡದ ನಿವಾಸಿಯಾಗಿದ್ದು ಮತ್ತು ರೋಗಿ-36ರ (ಮಗಳು) ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಉತ್ತರ ಕನ್ನಡದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
    - P67: 23 ವರ್ಷದ ಮಹಿಳೆ ಉತ್ತರ ಕನ್ನಡದ ನಿವಾಸಿಯಾಗಿದ್ದು ಮತ್ತು ರೋಗಿ-36ರ (ಮಗಳು) ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಉತ್ತರ ಕನ್ನಡದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
    - P68: 21 ವರ್ಷದ ಪುರುಷರೊಬ್ಬರು, ಬೆಂಗಳೂರಿನ ನಿವಾಸಿಯಾಗಿದ್ದು, ಲಂಡನ್ ದೇಶಕ್ಕೆ ಪ್ರಯಾಣ ಬೆಳಸಿ ದಿನಾಂಕ 17.03.2020 ರಂದು ಭಾರತಕ್ಕೆ ಹಿಂದಿರುಗಿರುವ ಪ್ರಯಾಣ ಹಿನ್ನಲೆಯಿರುತ್ತದೆ ಮತ್ತು ರೋಗಿ-25ರ (ಮಗ) ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಉತ್ತರ ಕನ್ನಡದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
    - P69: 23 ವರ್ಷದ ಪುರುಷರೊಬ್ಬರು ಹಿಂದುಪುರ, ಆಂಧ್ರಪ್ರದೇಶದ ನಿವಾಸಿಯಾಗಿದ್ದು, ರೋಗಿ-19ರ ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಚಿಕ್ಕಬಳ್ಳಾಪುರದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
    - P70: 70 ವರ್ಷದ ಪುರುಷರೊಬ್ಬರು ಚಿಕ್ಕಬಳ್ಳಾಪುರದ ನಿವಾಸಿಯಾಗಿದ್ದು, ರೋಗಿ-19ರ ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಚಿಕ್ಕಬಳ್ಳಾಪುರದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

- P71: 32 ವರ್ಷದ ಮಹಿಳೆ ಚಿಕ್ಕಬಳ್ಳಾಪುರದ ನಿವಾಸಿಯಾಗಿದ್ದು, ರೋಗಿ–19ರ ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಚಿಕ್ಕಬಳ್ಳಾಪುರದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
- P72: 38 ವರ್ಷದ ಪುರುಷರೊಬ್ಬರು ಚಿಕ್ಕಬಳ್ಳಾಪುರದ ನಿವಾಸಿಯಾಗಿದ್ದು, ರೋಗಿ–19ರ ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಚಿಕ್ಕಬಳ್ಳಾಪುರದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
- P73: 18 ವರ್ಷದ ಪುರುಷರೊಬ್ಬರು ಹಿಂದುಪುರ, ಆಂಧ್ರಪ್ರದೇಶದ ನಿವಾಸಿಯಾಗಿದ್ದು, ರೋಗಿ–19ರ ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಚಿಕ್ಕಬಳ್ಳಾಪುರದ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
- P74: 63 ವರ್ಷದ ಮಹಿಳೆ ಬೆಂಗಳೂರಿನ ನಿವಾಸಿಯಾಗಿದ್ದು, ಲಂಡನ್ ದೇಶಕ್ಕೆ ಪ್ರಯಾಣ ಮಾಡಿ ದಿನಾಂಕ 16.03.2020 ರಂದು ಭಾರತಕ್ಕೆ ಹಿಂದಿರುಗಿರುವ ಪ್ರಯಾಣ ಹಿನ್ನಲೆಯಿರುತ್ತದೆ. ಈ ವ್ಯಕ್ತಿಯನ್ನು ಬೆಂಗಳೂರಿನ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
- P75: 20 ವರ್ಷದ ಪುರುಷರೊಬ್ಬರು, ದಾವಣಗೆರೆ ನಿವಾಸಿಯಾಗಿದ್ದು, ರೋಗಿ–42ರ (ಸಹೋದರ) ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ದಾವಣಗೆರೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.
- P76: 24 ವರ್ಷದ ಪುರುಷರೊಬ್ಬರು, ಉತ್ತರಕನ್ನಡ ಜಿಲ್ಲೆಯ ನಿವಾಸಿಯಾಗಿದ್ದು, ರೋಗಿ–35ರ ಸಂಪರ್ಕ ಹೊಂದಿರುತ್ತಾರೆ. ಈ ವ್ಯಕ್ತಿಯನ್ನು ಉತ್ತರಕನ್ನಡ ಜಿಲ್ಲೆಯ ನಿಗದಿತ ಆಸ್ಪತ್ರೆಯಲ್ಲಿ ಪ್ರತ್ಯೇಕಗೊಳಿಸಲಾಗಿರುತ್ತದೆ.

**Karnataka District wise update**

| Sl. No | District | Total confirmed cases | cured / discharged | Death |
|---|---|---|---|---|
| 1 | Bengaluru | 41 | 5* | 1 |
| 2 | Kalburgi | 3 | 0 | 1 |
| 3 | Kodagu | 1 | 0 | 0 |
| 4 | Chikkaballapura | 8 | 0 | 0 |
| 5 | Mysore | 3 | 0 | 0 |
| 6 | Dharwad | 1 | 0 | 0 |
| 7 | Dakshina kannada | 7 | 0 | 0 |
| 8 | Uttarakannada | 7 | 0 | 0 |
| 9 | Davangere | 3 | 0 | 0 |
| 10 | Udupi | 1 | 0 | 0 |
| 11 | Tumkur | 1 | 0 | 1 |
| Total | | 76 | 5 | 3 |

* P1, P2, P3, P4 ಮತ್ತು P5 ಪ್ರಕರಣಗಳು ಗುಣಮುಖ ಹೊಂದಿ ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ ಮತ್ತು P6, P53 & P60 ಮರಣ ಹೊಂದಿರುತ್ತಾರೆ.

ಈ ಎಲ್ಲಾ ಕೋವಿಡ್–19 ಸೋಂಕಿತರ ಸಂಪರ್ಕದಲ್ಲಿದವರ ಪತ್ತೆ ಮಾಡಲು ಪ್ರಾರಂಭಿಸಲಾಗಿದೆ.

**ಸೂಚನೆ:** ಕರ್ನಾಟಕದಲ್ಲಿ ಒಟ್ಟು ಪತ್ತೆ ಮಾಡಲಾಗಿರುವ 76 ಪ್ರಕರಣಗಳಲ್ಲಿ 6 ಪ್ರಕರಣಗಳು ಕೇರಳದವರಾಗಿದ್ದು, ಅವರು ಕರ್ನಾಟಕದ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಅವರು ಕರ್ನಾಟಕದಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕರ್ನಾಟಕದಲ್ಲಿ ಈ ದಿನದವರೆಗೆ, **1,28,204** ಹೊರದೇಶದಿಂದ ಪ್ರಯಾಣಿಕರನ್ನು ತಪಾಸಣೆ ಮಾಡಲಾಗಿದೆ. ವಿಮಾನ ನಿಲ್ದಾಣವಾರು ವರದಿಗಳು ಈ ಕೆಳಕಂಡತೆ ಇವೆ.

1) ಕೆಂಪೇಗೌಡ ಅಂತರಾಷ್ಟ್ರೀಯ. ವಿಮಾನ ನಿಲ್ದಾಣ, ಬೆಂಗಳೂರು– 89,963.
**ದಿನಾಂಕ 17.03.2020 ರಿಂದ 23.03.2020 ರವರೆಗೆ ಬಂದಿಳಿದ ಮತ್ತು ತಪಾಸಣೆಗೆ ಒಳಪಟ್ಟ ಒಟ್ಟು ಅಂತರ ರಾಷ್ಟ್ರೀಯ ಪ್ರಯಾಣಿಕರ ಸಂಖ್ಯೆ 10,773 .**

2) ಮಂಗಳೂರು ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ– 31,917 ಪ್ರಯಾಣಿಕರು ಮಾಡಲಾಗಿದೆ. 6,324 ಪ್ರಯಾಣಿಕರನ್ನು ಮಂಗಳೂರು ಮತ್ತು ಕಾರವಾರ ಕಡಲ ಬಂದರುಗಳಲ್ಲಿ ತಪಾಸಣೆ ಮಾಡಲಾಗಿದೆ. ದಿನಾಂಕ 26–03–2020 ರಂದು 94 ಜನರನ್ನು ತಪಾಸಣೆ ಮಾಡಲಾಗಿದೆ.

**ಸಂಗ್ರಹ ವರದಿ**

| | **ಚಟುವಟಿಕೆ** | **ಈ ದಿನ** | **ಸಂಚಿತ** |
|---|---|---|---|
| ಅ | ಅವಲೋಕನೆಗಾಗಿ ಪಟ್ಟಿ ಮಾಡಲ್ಪಟ್ಟವರು | 610 | 14115 |
| ಆ | ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿ ಇರಿಸಲ್ಪಟ್ಟವರು | 69 | 182 |
| ಇ | ಪರೀಕ್ಷೆ ಮಾಡಲು ಸಂಗ್ರಹಿಸಲಾದ ಒಟ್ಟು ಮಾದರಿಗಳು | 195 | 3076 |
| ಈ | ನೆಗೆಟಿವ್ ಎಂದು ವರದಿಯಾದ ಒಟ್ಟು ಫಲಿತಾಂಶಗಳು | 141 | 2763 |
| ಉ | ಖಚಿತ ಪಟ್ಟ ಫಲಿತಾಂಶಗಳು | 12 | 76 |

**ನಿಗದಿತ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿರಿಸಲ್ಪಟ್ಟವರ ವಿವರ**

| **ಕ್ರ. ಸಂ.** | **ಜಿಲ್ಲೆಯ ಹೆಸರು** | **ಇಂದಿನ ಹೊಸ ಒಳರೋಗಿಗಳು** | **ಇಂದು ಬಿಡುಗಡೆ ಮಾಡಲಾದವರು** | **ಒಟ್ಟು ಪತ್ಯೇಕವಾಗಿರಿಸಿದವರು** |
|---|---|---|---|---|
| 1 | ಬೆಂಗಳೂರು (RGICD) | 0 | 0 | 6 |
| 2 | ಬೆಂಗಳೂರು (ಗುರುತಿಸಲಾದ ಆಸ್ಪತ್ರೆಗಳು) | 10 | 20 | 37 |
| 3 | ದಕ್ಷಿಣ ಕನ್ನಡ | 6 | 9 | 29 |
| 4 | ಬಳ್ಳಾರಿ | 5 | 0 | 5 |
| 5 | ಕಲಬುರಗಿ | 4 | 0 | 22 |
| 6 | ಕೊಡಗು | 0 | 0 | 4 |
| 7 | ಉಡುಪಿ | 0 | 0 | 12 |
| 8 | ಬೀದರ್ | 5 | 0 | 5 |
| 9 | ಗದಗ | 5 | 0 | 5 |
| 10 | ಉತ್ತರ ಕನ್ನಡ | 1 | 0 | 15 |
| 11 | ಧಾರವಾಡ | 0 | 0 | 4 |
| 12 | ಹಾಸನ | 1 | 1 | 5 |
| 13 | ಚಿತ್ರದುರ್ಗ | 0 | 0 | 6 |
| 14 | ದಾವಣಗೆರೆ | 0 | 0 | 2 |
| 15 | ಮೈಸೂರು | 11 | 0 | 14 |
| 16 | ಶಿವಮೊಗ್ಗ | 2 | 0 | 6 |
| 17 | ತುಮಕೂರು | 10 | 0 | 28 |
| 18 | ಚಿಕ್ಕಮಗಳೂರು | 1 | 1 | 1 |
| 19 | ಚಿಕ್ಕಬಳ್ಳಾಪುರ | 7 | 0 | 7 |
| 20 | ವಿಜಯಪುರ | 0 | 0 | 4 |
| 21 | ಯಾದಗಿರಿ | 0 | 0 | 1 |
| 22 | ಬಾಗಲಕೋಟೆ | 1 | 0 | 1 |
| | **ಒಟ್ಟು** | **36** | **31** | **219** |

**ಇಂದಿನ ವಿಷಯಗಳು:**

1) ಜಿಲ್ಲೆಗಳಲ್ಲಿ ಕೋವಿಡ್–19ರ ಜೈವಿಕ–ವೈದ್ಯಕೀಯ ತ್ಯಾಜ್ಯವನ್ನು ಸುರಕ್ಷಿತ ಮತ್ತು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರು ಮಾರ್ಚ್ 27, 2020 ರಂದು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ತಮ್ಮ ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಪ್ರತ್ಯೇಕ ಕೋವಿಡ್–19 ತ್ಯಾಜ್ಯವನ್ನು ಪ್ರತಿದಿನವೂ ಸಂಗ್ರಹಿಸಿ (CPCB ಮಾನದಂಡಗಳ ಪ್ರಕಾರ ಲೇಬಲ್ ಮತ್ತು ಪ್ಯಾಕ್) ಸುರಕ್ಷಿತವಾಗಿ ವಿಲೇವಾರಿ ಮಾಡಲು ಸುತ್ತೋಲೆಯನ್ನು ಹೊರಡಿಸಿರುತ್ತಾರೆ.

2) ದೈನಂದಿನ ಕೂಲಿ ಕಾರ್ಮಿಕರು ಮತ್ತು ಬಡಜನರಿಗೆ ಬೆಳಿಗ್ಗೆ 7.30 ರಿಂದ 10.00 ಗಂಟೆವರೆಗೆ ಮತ್ತು ಮಧ್ಯಾಹ್ನ 12.30ರಿಂದ ಮಧ್ಯಾಹ್ನ 3.00 ಗಂಟೆವರೆಗೆ ಹಾಗೂ ಸಂಜೆ 7.30ರಿಂದ ರಾತ್ರಿ 9.00 ಗಂಟೆವರೆಗೆ ಇಂದಿರಾ ಕ್ಯಾಂಟೀನ್‌ನಲ್ಲಿ ಉಚಿತ ಆಹಾರವನ್ನು ಒದಗಿಸಲು ಬಿ.ಬಿ.ಎಂ.ಪಿ. ಯಿಂದ ಸಾರ್ವಜನಿಕ ನೋಟಿಸ್ ನೀಡಲಾಗಿದೆ.

3) ವಲಸೆ ಕಾರ್ಮಿಕರುಗಳಿಗೆ ಉಚಿತವಾಗಿ ಆಹಾರವನ್ನು ವಿತರಿಸುವ ಅನುಕೂಲಕ್ಕಾಗಿ ಉಚಿತ ಸಹಾಯವಾಣಿ 155214 ವನ್ನು ಪ್ರಾರಂಭಿಸಲಾಗಿದೆ.

4) **Home Quarantine enforcement squad** ತಂಡದವರು, ಸಾರ್ವಜನಿಕರಿಂದ ಪಡೆದ ದೂರುಗಳ ಮೇರೆಗೆ ನಿನ್ನೆ 31 ವ್ಯಕ್ತಿಗಳನ್ನು ಕ್ವಾರಂಟೈನ್ ಮಾಡಲಾಗಿ ಇದೂವರೆಗೂ ಒಟ್ಟು 101 ವ್ಯಕ್ತಿಗಳನ್ನು ಮನೆ ಕ್ವಾರಂಟೈನ್‌ನಿಂದ ಆರೋಗ್ಯ ಕೇಂದ್ರ ಕ್ವಾರನ್‌ಟೈನ್‌ಗೆ ವರ್ಗಾವಣೆ ಮಾಡಿರುತ್ತಾರೆ.

5) ನಿಯೋಜಿತ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಪಾಸಿಟಿವ್ ಪ್ರಕರಣಗಳು ಮತ್ತು ಶಂಕಿತರು ಮತ್ತು ಸಮೂಹ ಕ್ವಾರಂಟೀನ್ ಕೇಂದ್ರಗಳಲ್ಲಿ ಅಥವಾ ಮನೆಗಳಲ್ಲಿ ಕ್ವಾರಂಟೀನ್ ವ್ಯವಸ್ಥೆಯಲ್ಲಿ ಇರುವವರು ಕನಿಷ್ಠ 14 ದಿನಗಳ ಕಾಲ ಅಥವಾ ಪಾಸಿಟಿವ್ ಪ್ರಕರಣದ ಸರಣಿ ಮಾದರಿಗಳು ನೆಗೆಟಿವ್ ಎಂದು ಸಾಬೀತಾಗುವ ತನಕ ಅಥವಾ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಸಲಹೆ ಸಿಗುವ ತನಕ ಸಂಬಂಧಪಟ್ಟ ವ್ಯಕ್ತಿಗಳನ್ನು ಬಿಡುಗಡೆ ಮಾಡುವುದಿಲ್ಲ. ಪ್ರತ್ಯೇಕ ವ್ಯವಸ್ಥೆಯಲ್ಲಿ ಇಷ್ಟೊಂದು ಸುದೀರ್ಘ ಕಾಲ ಸಂಯಮದಿಂದ ಇರಲು ಮಾನಸಿಕ ಸ್ಥೈರ್ಯದ ಅಗತ್ಯವಿರುತ್ತದೆ. ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಮತ್ತು ಸ್ಥೈರ್ಯದ ಅಗತ್ಯವಿರುತ್ತದೆ. ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಮತ್ತು ಸಂಪರ್ಕಿತರಿಗೆ ಮಾನಸಿಕ ಆರೋಗ್ಯದ ಆಪ್ತ ಸಮಾಲೋಚನೆಗೆ ವ್ಯವಸ್ಥೆ ಮಾಡಿದೆ. ಈವರೆಗೆ 11252 ಸಂಖ್ಯೆಯ ಕೌನ್ಸೆಲಿಂಗ್ ನಡೆದಿದೆ.

6) ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್‌ನ್ನು www.karnataka.gov.in. ಈ ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್–19 ರೋಗಿಯ ಪ್ರಯೋಗಶಾಲಾ ಫಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ಲಭ್ಯವಿರುತ್ತದೆ. ಅದರ ಜೊತೆಗೆ ಫಸ್ಟ್ ರೆಸ್‌ಪಾಂಡರ್ ಹಾಗೂ ಸಹಾಯವಾಣಿಗಳ ಸಂಖ್ಯೆ ಲಭ್ಯವಿರುತ್ತದೆ.

7) ಕೋವಿಡ್–19 ಎಲ್ಲಾ ರೀತಿಯ ಅನುಮಾನಗಳಿಗೆ ಸಹಾಯವಾಣಿ ಸಂಖ್ಯೆ 104 ರನ್ನು ಮತ್ತು ಹೊಸ ಸಂಖ್ಯೆ **9745697456** ರನ್ನು ಸಂಪರ್ಕಿಸಬಹುದಾಗಿದೆ.

104 ಆರೋಗ್ಯ ಸಹಾಯವಾಣಿ (ಶುಲ್ಕರಹಿತ ಕಾಲ್ ಸೆಂಟರ್) ಕೋವಿಡ್–19 ಕುರಿತ ಕರೆಗಳಿಗಾಗಿ 210 ಆಸನಗಳನ್ನು ಮೀಸಲಿರಿಸಿದೆ. ದಿನಾಂಕ 27.03.2020 ರಂದು 24,980 ಕರೆಗಳನ್ನು ಸ್ವೀಕರಿಸಲಾಗಿದೆ ಮತ್ತು 109 ಅಗತ್ಯ ಮಾರ್ಗದರ್ಶನದ ನೀಡುವ ಕರೆಗಳನ್ನು ಸೇರಿ ಒಟ್ಟು 30,205 ಹೊರ ಕರೆಗಳನ್ನು ಮಾಡಲಾಗಿದೆ.

**ಸಾರ್ವಜನಿಕರಿಗೆ ಮನವಿ:** ಕೋವಿಡ್–19 ಪೀಡಿತ ದೇಶಗಳಿಂದ ಹಿಂತಿರುಗಿರುವ ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರುವ ಯಾರಾದರೂ ಭಾರತಕ್ಕೆ ಹಿಂತಿರುಗಿದ ದಿನದಿಂದ 14 ದಿನಗಳವರೆಗೆ, ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಮನೆಯಲ್ಲಿ ಪ್ರತ್ಯೇಕವಾಗಿರುವುದು ಹಾಗೂ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡಿಕೊಳ್ಳುವುದು ಅಥವಾ 104 ಸಹಾಯವಾಣಿಗೆ ಕರೆ ಮಾಡುವುದು. ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ. ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ / ಟಿಶ್ಯೂ ಪೇಪರನ್ನು ಬಳಸಿ, ಕೈ ಸ್ವಚ್ಛಗೊಳಿಸುವ ದ್ರಾವಣ ಅಥವಾ ನೀರು ಮತ್ತು ಸೋಪು ಬಳಸಿ ಆಗಾಗ ಕೈಗಳನ್ನು ತೊಳೆದುಕೊಳ್ಳಿ ಮತ್ತು ಸಾಮಾಜಿಕ ಸಮೂಹ ಗುಂಪು ಸೇರುವಿಕೆಯನ್ನು ಮಾಡಬೇಡಿ.

***ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ***
***ನಾವೆಲ್ಲರೂ ಒಟ್ಟಾಗಿ ಕೋವಿಡ್-19 ವಿರುದ್ಧ ಹೋರಾಡೋಣ***
***ಸಹಾಯವಾಣಿ ಸಂಖ್ಯೆ* 9745697456, *080-46848600, 080-66692000 & 104***

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಜಾಲತಾಣದಲ್ಲಿ ಲಭ್ಯವಿದೆ: https://karunadu.karnataka.gov.in/hfw/kannada/Pages/covid-19.aspx

**********